# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002

***ಪತ್ರಿಕಾ ಪ್ರಕಟಣೆ*** **ದಿನಾಂಕ: 08.10.2011**

ಪಾಲಿಕೆ ವ್ಯಾಪ್ತಿಯಲ್ಲಿ ಕೂಡಾ ರಸ್ತೆಗಳನ್ನು ಅಭಿವೃದ್ಧಿಪಡಿಸುವಾಗ ಟೆಂಡರ್ ಶೂರ್ ಯೋಜನೆಯಲ್ಲಿ ಒಳಗೊಂಡ ಸರಳೀಕೃತ ಗುತ್ತಿಗೆ ಒಪ್ಪಂದ, ಗುಣಮಟ್ಟದ ಪರಿಶೀಲನೆ ಮತ್ತು ತಾಂತ್ರಿಕ ಮಾನದಂಡ ಮತ್ತು ಸ್ಥಳೀಯರ ಪಾಲ್ಗೊಳ್ಳುವಿಕೆ ಮುಂತಾದ ಪ್ರಮುಖ ಅಂಶಗಳನ್ನು ಅಳವಡಿಸಿಕೊಂಡು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದೆಂದು ಪಾಲಿಕೆ ಆಯುಕ್ತರಾದ ಶ್ರೀ ಸಿದ್ದಯ್ಯ ರವರು ತಿಳಿಸಿದ್ದಾರೆ.

ಆಯುಕ್ತರು ನಿನ್ನೆ ರಾತ್ರಿ ಜಯನಗರ, ಬಸವನಗುಡಿ, ವಿಜಯನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ತಪಾಸಣೆ ಕೈಗೊಂಡು ರಸ್ತೆಗುಂಡಿ ಮುಚ್ಚುವ ಕಾರ್ಯ ಮತ್ತು ದಸರಾ ಹಬ್ಬದ ಪ್ರಯುಕ್ತ ಸಂಗ್ರಹಣೆಗೊಂಡ ಕಸವಿಲೇವಾರಿಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿದರು.

ರಾತ್ರಿ ರಸ್ತೆಗುಂಡಿ ಮುಚ್ಚುವ ಮತ್ತು ರಸ್ತೆ ಸ್ವಚ್ಛತೆ ಕಾರ್ಯವನ್ನು ಗಮನಿಸಿದ ಆಯುಕ್ತರು ರಸ್ತೆಗಳ ಮೇಲೆ ಹೆಚ್ಚಿನ ಸಮಯ ನೀರು ನಿಂತು ವಾಹನ ಸಂಚಾರದಿಂದ ಗುಂಡಿಗಳು ನಿರ್ಮಾಣಗೊಳ್ಳುತ್ತವೆ. ಆದ್ದರಿಂದ ರಸ್ತೆಗಳನ್ನು ಅಭಿವೃದ್ಧಿಪಡಿಸುವಾಗ ಅವುಗಳ ಸರ್ಫೇಸ್ ರಚನೆ, ಪಾದಚಾರಿ ಮಾರ್ಗ, ಸರಾಗವಾಗಿ ನೀರು ಹರಿಯಲು ರಸ್ತೆ ಬದಿ ಮೋರಿ ನಿರ್ಮಾಣ, ಈ ಅಂಶಗಳ ಕಡೆಗೆ ಹೆಚ್ಚಿನ ಗಮನಹರಿಸಿದರೆ ರಸ್ತೆಗಳು ದೀರ್ಘಕಾಲ ಬಾಳಿಕೆ ಬರುತ್ತದೆ ಎಂದು ಅಭಿಯಂತರರುಗಳಿಗೆ ತಿಳಿಸಿದರು.

ಎಂ.ಜಿ. ರಸ್ತೆಯಿಂದ ಬೈಯಪ್ಪನಹಳ್ಳಿಯವರೆಗೆ ಮೆಟ್ರೋ ಮಾರ್ಗದಲ್ಲಿ ಹಮ್ಮಿಕೊಳ್ಳಲಾದ ರಸ್ತೆ ಸ್ವಚ್ಛತೆ ಮಾದರಿಯಂತೆ ಜಯನಗರದ ಸೌತ್‌ಎಂಡ್ ರಸ್ತೆಯಿಂದ ರಿಂಗ್ ರಸ್ತೆಯವರೆಗೆ ನಿನ್ನೆ ರಾತ್ರಿ ಟ್ರಾಕ್ಟರ್, ಟಿಪ್ಪರ್ ಮತ್ತು ಗ್ಯಾಂಗ್‌ಮೆನ್‌ಗಳನ್ನು ಬಳಸಿಕೊಂಡು ತೀವ್ರ ಸ್ವಚ್ಛತೆ ಕೈಗೊಳ್ಳಲಾಯಿತು. ಈ ರಸ್ತೆಯಲ್ಲಿನ ಮೆಟ್ರೋ ಕಾಮಗಾರಿಯ ಜೊತೆ ಜೊತೆಗೆ ರಸ್ತೆ ಅಭಿವೃದ್ಧಿ, ಪಾದಚಾರಿ ಮಾರ್ಗ ದುರಸ್ಥಿ ಮತ್ತು ಸ್ವಚ್ಛತೆ ಕಾರ್ಯ ಕೈಗೊಳ್ಳಲಾಗುವುದು. ಮೆಟ್ರೋ ಕಾಮಗಾರಿ ಪೂರ್ಣಗೊಳ್ಳುವವರೆಗೂ ಕಾಯುವುದರಿಂದ ಸಾರ್ವಜನಿಕರಿಗೆ ತುಂಬಾ ಅನಾನುಕೂಲ ಉಂಟಾಗುತ್ತದೆ. ಆದ್ದರಿಂದ ಈ ಕೆಲಸಗಳನ್ನು ಕೂಡಾ ತಕ್ಷಣವೇ ನಿರ್ವಹಿಸಲಾಗುವುದೆಂದು ಆಯುಕ್ತರು ತಿಳಿಸಿದರು.

ಲಕ್ಷ್ಮಣರಾವ್ ಬುಲೆ ವಾರ್ಡ್ ಉದ್ಯಾನವನ ಅಭಿವೃದ್ಧಿಗೆ ಈಗಿನಿಂದಲೇ ಕ್ರಮ ಕೈಗೊಳ್ಳಲಾಗುತ್ತಿದೆ. ಮೆಟ್ರೋ ಕಾಮಗಾರಿ ಪೂರ್ಣಗೊಳ್ಳುವ ಹೊತ್ತಿಗೆ ಇದೊಂದು ಸುಂದರವಾದಂತಹ ತಾಣವನ್ನಾಗಿ ಪರಿವರ್ತನೆಗೊಳ್ಳಲಿದೆ ಎಂದು ತಿಳಿಸಿದರು.

ಸೌತ್‌ಎಂಡ್ ವೃತ್ತದಲ್ಲಿ ಇರುವ ಟ್ರಾಫಿಕ್ ಐಲೆಂಡ್ ನಿರ್ವಹಣೆ ಕಾರ್ಯವನ್ನು ಹಾಸ್‌ಮೆಟ್ ಆಸ್ಪತ್ರೆಯವರಿಗೆ ವಹಿಸಿಕೊಡಲಾಗಿತ್ತು. ಇದನ್ನು ಸರಿಯಾಗಿ ನಿರ್ವಹಿಸದೇ ಇರುವುದನ್ನು ಗಮನಿಸಿದ ಆಯುಕ್ತರು ನಗರದಲ್ಲಿ ಎಲ್ಲೆಲ್ಲಿ ಟ್ರಾಫಿಕ್ ಐಲೆಂಡ್‌ಗಳನ್ನು ನಿರ್ವಹಣೆಗಾಗಿ ಹಾಸ್‌ಮೆಟ್ ಆಸ್ಪತ್ರೆಯವರಿಗೆ ವಹಿಸಿಕೊಡಲಾಗಿತ್ತು, ಎಲ್ಲವನ್ನೂ ರದ್ದುಪಡಿಸಿ, ಪಾಲಿಕೆಯಿಂದ ನಿರ್ವಹಿಸಲಾಗುವುದೆಂದು ಆಯುಕ್ತರು ತಿಳಿಸಿದರು.

ಜಯನಗರದ ಸೌತ್‌ಎಂಡ್ ರಸ್ತೆಯಿಂದ ಆರ್ಮುಗಂ ವೃತ್ತದ ಕಡೆಗೆ ರಸ್ತೆ, ಎಂ.ಎನ್. ಕೃಷ್ಣರಾವ್ ಪಾರ್ಕ್ ಎದುರುಗಡೆ ಮತ್ತು ಬ್ಯಾಂಕ್ ಕಾಲೋನಿಯ 80 ಅಡಿ ರಸ್ತೆಯಲ್ಲಿ (ಆಸ್ತಿ ಸಂಖ್ಯೆ: 1034) ಕಟ್ಟಡ ನಿರ್ಮಾಣದ ಸಾಮಗ್ರಿಗಳನ್ನು ರಸ್ತೆ ಮೇಲೆ ಹಾಕಿ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಮಾಡಿದ್ದರಿಂದ ಆಸ್ತಿ ಮಾಲೀಕರ ಮೇಲೆ ತಲಾ ರೂ.50,000/- ರೂ.ಗಳ ದಂಡ ವಿಧಿಸಲು ಸೂಚನೆ ನೀಡಿದರು.

ವಾರ್ಡ್ ನಂ.163, ಶ್ರೀನಿವಾಸನಗರದಲ್ಲಿರುವ ಕೆಂಪೇಗೌಡ ಆಟದ ಮೈದಾನ ಮತ್ತು ಒಳಕ್ರೀಡಾಂಗಣಕ್ಕೆ ಭೇಟಿ ನೀಡಿದ ಆಯುಕ್ತರು, ಸ್ಥಳೀಯ ಮಕ್ಕಳು ಇವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿರುವುದರಿಂದ ಅವರಿಗೆ ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿ, ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಆಟದ ಮೈದಾನದಲ್ಲಿ ಮಳೆ ನೀರಿನ ಕೊಯ್ಲು ಘಟಕದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದನ್ನು ಪರಿಶೀಲಿಸಿದ ಆಯುಕ್ತರು, ಪ್ರತಿಯೊಂದು ಮಳೆ ನೀರನ್ನು ಕೂಡ ಸಂಗ್ರಹಿಸಿ, ಪುನರ್ ಬಳಕೆ ಮಾಡಲು ತಿಳಿಸಿದರು. ಹಾಗೂ ಈ ವಾರ್ಡ್‌ನಲ್ಲಿ ಬರುವ ಎಲ್ಲಾ ಉದ್ಯಾನವನ, ಆಟದ ಮೈದಾನಗಳಲ್ಲಿ ಮಳೆ ನೀರು ಸಂಗ್ರಹಣೆ ಘಟಕ ಸ್ಥಾಪಿಸಲು ತಿಳಿಸಿದರು. ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರವೇ ಭೇಟಿ ನೀಡಿ ಪರಿಶೀಲಿಸುವುದಾಗಿ ತಿಳಿಸಿದರು.

ತದನಂತರ ವಿಜಯನಗರ, ಆರ್.ಪಿ.ಸಿ. ಬಡಾವಣೆಯ ರೈಲ್ವೆ ಪ್ಯಾರಲೆಲ್ ರಸ್ತೆ, ಮಾಗಡಿ ರಸ್ತೆ, ಕೆಂಗಲ್ ಹನುಮಂತಯ್ಯ ರಸ್ತೆ, ಜೆ.ಸಿ. ರಸ್ತೆ, ಮುಂತಾದ ಕಡೆ ರಾತ್ರಿ ಹಮ್ಮಿಕೊಳ್ಳಲಾದ ಸ್ವಚ್ಛತಾ ಕಾರ್ಯವನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಬಿ.ಎನ್. ವಿಜಯಕುಮಾರ್ ಮತ್ತು ಪಾಲಿಕೆ ಅಧಿಕಾರಿಗಳು ಹಾಜರಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**